ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 492/17**

ಪಿಡಬ್ಲ್ಯುಃ - 1
ಸಿ ಡಬ್ಲ್ಯುಃ -1

ದಿನಾಂಕಃ 29.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ದೇವಯ್ಯ |
| ತಂದೆಯ ಹೆಸರು | - | ಭೀಮಯ್ಯ |
| ವಯಸ್ಸು | - | 58 ವರ್ಷ |
| ವೃತ್ತಿ | - | ವ್ಯವಸಾಯ |
| ವಾಸಸ್ಥಳ | - | ಕಿರಂದಾಡು ಗ್ರಾಮ |

**ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

1 ನೇ ಆರೋಪಿ ನನ್ನ ದೊಡ್ಡಮ್ಮನ ಮಗ. ಚಾಸಾ-2 ರಿಂದ 4 ಗೊತ್ತು. ಕಿರಂದಾಡು ಗ್ರಾಮದ ಸರ್ವೆ ನಂಬರ್ 232/2 ಮತ್ತು 232/3 ಸ್ವತ್ತುಗಳು ನನ್ನ ಮತ್ತು ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರ ಹೆಸರಿನಲ್ಲಿ ಅಂದರೆ ಚಾಸಾ-2 ರಿಂದ 4 ರವರ ಹೆಸರಿನಲ್ಲಿ ಜಂಟಿಯಾಗಿತ್ತು. ಆಸ್ತಿ ನಮ್ಮ ಸ್ವಾಧೀನದಲ್ಲೇಇದ್ದು, ನನ್ನ ಅರಿವಿಗೆ ಬಾರದ ಹಾಗೆ ಆರೋಪಿತರು ನಮ್ಮ ಗ್ರಾಮದ ವಿಲೇಜ್ ಅಕೌಂಟೆಂಟ್ ಜೊತೆ ಸೇರಿ 1 ನೇ ಆರೋಪಿಯ ಹೆಸರಿಗೆ ನಮ್ಮ ಆಸ್ತಿಯನ್ನು ಮಾಡಿಕೊಂಡು ಆಸ್ತಿಯ ಮೇಲೆ ರೂ.60 ಲಕ್ಷ ಸಾಲವನ್ನು 4 ಬ್ಯಾಂಕುಗಳಿಂದ ಪಡೆದಿದ್ದಾನೆ. ಸದರಿ ದಾಖಲೆಗಳಿಗೆ ನನ್ನ ಮತ್ತು ಚಾಸಾ-2 ರಿಂದ 4 ರವರ ಸಹಿಗಳನ್ನು ನಕಲು ಮಾಡಿ, ನಕಲು ದಾಖಲೆ ಸೃಷ್ಟಿ ಮಾಡಿ ಸಾಲ ಪಡೆದಿದ್ದಾನೆ. ಈ ಬಗ್ಗೆ ನಾನು ಪೊಲೀಸರಿಗೆ

ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ತಮ್ಮ ಸಹಿ ಗುರುತಿಸಿರುತ್ತಾರೆ. ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**